◆ ನೀವು ಆರಂಭದಲ್ಲಿ ಕರ್ನಾಟಕ ಸಂಸ್ಕೃತಿಯ ವಿವಿಧ ಕಲ್ಪನೆಗಳಲ್ಲಿ ದಟ್ಟವಾಗಿ ತೆರೆದುಕೊಂಡ್ರಿ. 'ಮರುಳಶಂಕರದೇವ', 'ಸಿಂಗಿರಾಜ ಸಂಪಾದನೆ', 'ಸಮಗಾರ ಭೀಮವ್ವ' ಇತ್ಯಾದಿ. ಆಮೇಲೆ ತುಂಬಾ ವಿಶ್ವಾತ್ಮಕವಾದ ಭಾಷೆ, ನುಡಿಗಟ್ಟು, ರೂಪಕ, ಪ್ರತಿಮೆಗಳ ಲೋಕ ನಿಮ್ಮ ಕಾವ್ಯದೊಳಗೆ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡಿತು. ಹೀಗೆ ವಿಭಿನ್ನ ಜಗತ್ತಿನ ರೂಪಕಗಳನ್ನು ಒಟ್ಟಿಗೆ ಬೆಸೆಯುವ ನಿಮ್ಮ ನಂಬಿಕೆಯ ಲೋಕ ಏನದು? ಇದನ್ನೆಲ್ಲ ಕಟ್ಟುವಾಗ ಕವಿಯಾಗಿ ಯಾವ ಸಮಸ್ಯೆಗಳನ್ನು ಎದುರಿಸಿದ್ರಿ?

'ಕುಮಾರವ್ಯಾಸ ಭಾರತ'ದ ಪ್ರಸ್ತಾವನೆಯಲ್ಲಿ ಆತ ಒಂದು ಮಾತನ್ನ ಹೇಳ್ತಾನೆ; 'ತಿಳಿಯ ಹೇಳುವೆ ಕೃಷ್ಣ ಕಥೆಯನು, ಇಳೆಯ ಜಾಣರು ಮೆಚ್ಚುವಂತೆ'. ಆತ ಕೋಳಿವಾಡದವನಾದ್ರೂ ಅವನ ಓದುಗ ವರ್ಗ ತುಂಬಾ ವಿಶಾಲವಾಗಿದೆ. ಅವರು ಇಳೆಯ ಜಾಣರು. ಎಲ್ಲೆಡೆಗೆ ಇರುವಂಥವರು. ಅವರು ಕೇವಲ ಕೋಳಿವಾಡದವರಲ್ಲ. ಇಡೀ ಪೃಥ್ವಿಯನ್ನು ಉದ್ದೇಶಿಸಿ ಅವನು ಮಾತಾಡುತ್ತಿದ್ದಾನೆ. ನಮ್ಮ ಜನಪದ ಕವಿಗಳು ಕೂಡ ಹಾಗೇ ಅಲ್ಲವೆ? 'ಧರಣಿ ಮಂಡಲ ಮಧ್ಯದೊಳಗೆ...' ಇತ್ಯಾದಿ. ಇದು ಕರ್ನಾಟಕದ ಕತೆಯೂ ಹೌದು, ಧರಣಿಮಂಡಲದ ಕತೆಯೂ ಹೌದು. ಕವಿಗಳಿಗೆ ಜಿಯಾಗ್ರಫಿ ಒಂದರ್ಥದಲ್ಲಿ ಬರೀ ಭೌಗೋಳಿಕವಲ್ಲ ಅದೊಂದು ಪವಿತ್ರ ಭೌಗೋಳಿಕ. ತಮಿಳುನಾಡಿನಲ್ಲಿ ಶೈವರಿಗೆ ಚಿದಂಬರಂ, ಹಾಗೆಯೇ ಶ್ರೀವೈಷ್ಣವರಿಗೆ ಪೆರಂಬದೂರು. ಮುಸ್ಲಿಂರಿಗೆ ಮೆಕ್ಕಾ ಮದೀನಾ, ಕ್ರೈಸ್ತರಿಗೆ ಬೆತ್ಲೆಹೇಮ್, ಯಹೂದಿಗಳಿಗೆ ಜೆರೋಸಲೆಮ್ ಪವಿತ್ರ ಸ್ಥಳ. ಪ್ರತಿಯೊಂದು ಜನಾಂಗಕ್ಕೂ ಅವರದೇ ಆದ ಪವಿತ್ರ ಭೌಗೋಳಿಕ ಪ್ರದೇಶವಿದೆ. ನೈಜೀರಿಯಾದರಲ್ಲಿ ಯುರೋಬಾ ಜನಾಂಗಕ್ಕೆ 'ಇದ್ರಾ' ಎಂಬ ಪರ್ವತ ಪ್ರದೇಶವಿದೆ. ಪ್ರತಿಯೊಂದು ಬುಡಕಟ್ಟಿಗೂ ಇಂಥ ತಮ್ಮದೇ ಆದ ಪ್ರದೇಶಗಳಿವೆ. ನನಗನಿಸೋದು ಒಬ್ಬ ಕವಿ ತನ್ನ ಅಂಥದ್ದೊಂದು ಪವಿತ್ರ ಕೇಂದ್ರವೊಂದನ್ನು ಹುಡ್ಕೋಬೇಕು. ಡಬ್ಲ್ಯು. ಬಿ. ಏಟ್ಸ್ ಇದನ್ನು 'ಎನಿಮಾಮುಂಡಿ' ಎಂದು ಕರೆದುಕೊಂಡ. ಆತ ಐರ್ಲೆಂಡ್ ಮೈಥಾಲಜಿ, ಗ್ರೀಕ್ ಮೈಥಾಲಜಿ ಇದನ್ನೆಲ್ಲ ಸೇರಿಸಿ ಇದನ್ನು ಕಟ್ಟಿಕೊಂಡ. ಹೀಗೆ ಪ್ರತಿಯೊಬ್ಬ ಕವಿ ಇದನ್ನು ಸಹಜವಾಗಿ ರೂಪಿಸಿಕೊಳ್ಳಬೇಕು. ಟಿ.ಎಸ್. ಎಲಿಯೆಟ್ ಯುರೋಪಿಯನ್ ಟ್ರೆಡಿಷನ್ ಮೂಲಕವೇ ಇದನ್ನು ಕಟ್ಟಿಕೊಂಡ. ಗೋಪಾಲಕೃಷ್ಣ ಅಡಿಗರು ಆರ್ಷೇಯ ಪರಂಪರೆಯ ಮೂಲಕ ಇದನ್ನು ಕಂಡುಕೊಂಡ್ರು. ದ.ರಾ. ಬೇಂದ್ರೆಯವರು ಧಾರವಾಡದ ತಾಯಿಯಿಂದ, ಅಲ್ಲಿನ ಪರಿಸರದಿಂದ ಒಂದು ಪವಿತ್ರ ಕ್ಷೇತ್ರವನ್ನು ಕಟ್ಟಿಕೊಂಡ್ರು, ಕುವೆಂಪು ಮಲೆನಾಡಿನ ಕವಿಶೈಲದಲ್ಲಿ. ಹೀಗೆ ಪ್ರತಿಯೊಬ್ಬ ಕವಿ ಕಟ್ಟಿಕೊಳ್ಳುವ ಇಂಥ ಕ್ಷೇತ್ರಗಳು ತಮ್ಮ ಸಂಬಂಧವನ್ನು ದೇಶಾತೀತ ಮತ್ತು ಕಾಲಾತೀತವಾಗಿ ಎಲ್ಲೆಲ್ಲೊ ಇಟ್ಟುಕೊಂಡಿರುತ್ತವೆ. ಆದ್ರೆ ಅದರ ಮೂಲ ಬಿಂದು ಅವನ ಪವಿತ್ರ ಸ್ಥಳವೇ ಆಗಿರುತ್ತದೆ. ನಾನು ನನ್ನ ಇಂಥದ್ದೊಂದು ಸ್ಥಳವನ್ನು ಕರ್ನಾಟಕದ ಶೈವ, ಶರಣ, ಸೂಫಿ, ಸಿದ್ಧ ಪರಂಪರೆಯಿಂದ ಕಟ್ಟಿಕೊಂಡೆ. ಜಾತಿ ಕುಲಗಳನ್ನು ಮೀರಿದ ಒಂದು ಆಧ್ಯಾತ್ಮಿಕ ಪರಂಪರೆ ಏನಿತ್ತು ಅದರಿಂದ ಕಲಿಯಲು ಆರಂಭಿಸಿದೆ. ಇದರಲ್ಲಿ ಅನೇಕ ಸಂಸ್ಕೃತಿಗಳಿವೆ. ಶರಣ ಚಳವಳಿ ಎನ್ನುವುದು ಅನೇಕ ಸಂಸ್ಕೃತಿಗಳ ಆಗರ. ನಾನು ಉದ್ದೇಶಪೂರ್ವಕವಾಗಿ 'ಶರಣ' ಎಂಬ ಪದ ಬಳಸುತ್ತಿರುವೆ. ಯಾಕೆಂದರೆ ಇದೊಂದು ಪವಿತ್ರವಾದ ಪಂಥ. ಇದನ್ನು ಅರಿಯಲು ಯತ್ನಿಸಿದೆ. ವಚನಗಳ ಮೂಲಕ, ಮಲೆಮಹದೇಶ್ವರ–ಮಂಟೇಸ್ವಾಮಿ ಮೂಲಕ, ತತ್ವಪದಗಳ ಮೂಲಕ ಹಾಗೂ ಇದಕ್ಕೆ ಸಂವಾದಿಯಾದ ಇತರ ಪರಂಪರೆಗಳು ಸೂಫಿ ಇತ್ಯಾದಿ ನನ್ನ ಕಾವ್ಯಕ್ಕೆ ನೆಲೆಯಾದವು. ಸಿಖ್ ಧರ್ಮದ ಗುರುಗೋವಿಂದಸಿಂಗರನ್ನೂ ನಾನು ಅಧ್ಯಯನ ಮಾಡಿದ್ದೇನೆ. ಇದೆಲ್ಲ ನನ್ನ ಸೋರ್ಸ್. ನನ್ನ ತಾಯಿ ತಮಿಳುನಾಡಿನವರು. ಹೀಗಾಗಿ ನನಗೆ ದ್ರಾವಿಡ ಸಂಸ್ಕೃತಿಯ ಬಗ್ಗೆ ಬಹಳ ಆಸಕ್ತಿ. ತಮಿಳಿನ 'ತೋಲ್ಕಾಪ್ಪಿಯಂ', 'ಶಿಲಪ್ಪದಿಗಾರಂ', ವೈಷ್ಣವ ಮತ್ತು ಶ್ರೀವೈಷ್ಣವ ಪರಂಪರೆ ಇವುಗಳನ್ನೂ ನಾನು